# ಆಧುನಿಕ ದ್ರೌಪದಿ!



ಮಹಾಭಾರತ ದ್ರೌಪದಿ, ಪಂಚ ಪಾಂಡವರಿಗೆ ಪತ್ನಿಯಾಗಿದ್ದ ಕಥೆ ಎಲ್ಲರಿಗೂ ಗೊತ್ತಿದೆಯಲ್ಲವೇ?. ಆದರೆ 21 ನೇ ಶತಮಾನದಲ್ಲಿಯೂ ಭಾರತೀಯ ನಾರಿಯೊಬ್ಬಳು ಥೇಟ್ ದ್ರೌಪದಿಯಂತೆ ಐದು ಗಂಡಂದಿರೊಂದಿಗೆ ಸುಖ ಜೀವನ ನಡೆಸುತ್ತಿದ್ದಾಳೆ.

ಉತ್ತರ ಭಾರತದ ಡೆಹ್ರಾಡೂನ್ ಸಮೀಪದ ಹಳ್ಳಿಯೊಂದರಲ್ಲಿರುವ 21 ವರ್ಷ ವಯಸ್ಸಿನ ರಾಜೋವರ್ಮಾಳು ಮದುವೆಯಾಗಿ ಸಂಸಾರ ನಡೆಸುತ್ತಿರುವುದು ಒಂದಲ್ಲ ಎರಡಲ್ಲ, ಐದು ಜನ ಗಂಡಂದಿರೊಂದಿಗೆ. ಇರುವ ಒಂದೇ ರೂಮಿನ ಮನೆಯಲ್ಲಿ ಸರತಿಯಂತೆ ಪ್ರತೀ ರಾತ್ರಿಯೂ ಒಬ್ಬೊಬ್ಬರ ಜೊತೆ ಮಲಗಿಕೊಳ್ಳುತ್ತಾಳಂತೆ. ಇನ್ನೊಂದು ವಿಶೇಷ ಸಂಗತಿ ಎಂದರೆ ತನ್ನ 18 ತಿಂಗಳ ಮಗುವಿನ ನಿಜವಾದ ಅಪ್ಪ ಯಾರೆಂದು ಈಕೆಗೆ ಗೊತ್ತೇ ಇಲ್ಲ!

ನಾಲ್ಕು ವರ್ಷದ ಹಿಂದೆ ರಾಜೋವರ್ಮಾಳು ಹಿಂದೂ ಸಂಪ್ರದಾಯದಂತೆ ಮೊದಲು ಮದುವೆಯಾಗಿದ್ದು 21 ವರ್ಷ ವಯಸ್ಸಿನ ಗುಡ್ಡುವರ್ಮನೊಂದಿಗೆ. ನಂತರ ಈತನ ಸಹೋದರರಾದ ಸಂತರಾಮ್ ವರ್ಮ (28 ವರ್ಷ), ಬೈಜು ವರ್ಮ (32 ವರ್ಷ), ಗೋಪಾಲ ವರ್ಮ (26 ವರ್ಷ) ಹಾಗೂ ದಿನೇಶ್ ವರ್ಮ (19 ವರ್ಷ)ರ ಜೊತೆ ಮದುವೆ ಮಾಡಿಕೊಂಡಿದ್ದಾಳೆ. ಇದು ಬಲು ವಿಚಿತ್ರವೆನಿಸಿದರೂ, ಒಡಹುಟ್ಟಿದ ಅಣ್ಣ ತಮ್ಮಂದಿರನ್ನು ಮದುವೆ ಮಾಡಿಕೊಳ್ಳುವ ಬಹು ಪತಿತ್ವ ಪದ್ಧತಿ ಡೆಹ್ರಾಡೂನ್‌ನ ಹಳ್ಳಿಗಳಲ್ಲಿ ಜಾರಿಯಲ್ಲಿದೆಯಂತೆ.

ರಾಜೋ ವರ್ಮಳಿಗೆ ಎಲ್ಲಾ ಗಂಡಂದಿರನ್ನು ಸ್ವೀಕರಿಸುವ ಬಗ್ಗೆ ಮೊದಲೇ ತಿಳಿದಿತ್ತು; ಏಕೆಂದರೆ ಇವಳ ತಾಯಿಯೂ ಕೂಡ ಮೂರು ಜನ ಸಹೋದರರನ್ನು ಮದುವೆಯಾಗಿದ್ದಳಂತೆ. 'ಮೊದ ಮೊದಲು ಪದ್ಧತಿ ನನಗೆ ಅಸಹ್ಯವೆನಿಸಿತ್ತು. ಈಗ ಯಾವ ಗಂಡನಿಗೂ ಪಕ್ಷಪಾತ ಮಾಡದೆ ಸರಿಸಮಾನವಾಗಿ ಕಾಣುತ್ತಿದ್ದೇನೆ. ಬೇರೆಯವರಂತೆ ನಾನು ಅತ್ಯಂತ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದೇನೆ'ಎಂದು ಪತ್ರಿಕಾ ಸಂದರ್ಶನವೊಂದರಲ್ಲಿ ರಾಜೋ ವರ್ಮ ನುಡಿದಿದ್ದಾಳೆ. ಹಾಸಿಗೆಯೊಂದೂ ಇರದ ಒಂದೇ ಕೋಣೆಯ ಮನೆಯಲ್ಲಿ, ಬರೀ ಕಂಬಳಿಯನ್ನು ಹಾಸಿಕೊಂಡು ದಿನಕ್ಕೊಬ್ಬ ಪತಿಯೊಡನೆ ಮಲಗಿ ಸುಖೀ ಸಂಸಾರವನ್ನು ನಡೆಸುತ್ತಿರುವ ಈಕೆಯನ್ನು ಕಲಿಯುಗದ ದ್ರೌಪದಿ ಎಂದು ಕರೆಯುವುದೇ ಹೆಚ್ಚು ಸೂಕ್ತ.

■ ವಿದ್ಯಾ ವಿ. ಹಾಲಭಾವಿ

